ಅಂತಂದ. 'ಸ್ಸಾರಿ ಅಂತೀಯೇಕೋ, ಹುಡುಗ... ಅವಳ ಬಗ್ಗೆ ಅವರಿವರ ಅನುಕಂಪವನ್ನು ನಿರೀಕ್ಷಿಸುವ ಹಂತವನ್ನು ನಾನು ಮೀರಿಬಿಟ್ಟಿದ್ದೇನೆ...' ಎಂದು ನಿರ್ಲಿಪ್ತವಾಗಿ ಹೇಳಿದೆ. 'ಇನ್ನೇನಿದ್ದರೂ, ಅವಳೊಳಗಿನ ಜೀವ(ಅದನ್ನು ಆನಂದ ಅಂತ ನಾನು ಕರೆಯುತ್ತೇನೆ) ಈ ಪ್ರಕೃತಿಯಲ್ಲಿರುವ ಮಹಾನಂದವನ್ನು ಸೇರಲಿ ಅಂತಷ್ಟೇ ಆಶಿಸೋದು...' ಎಂದು ಹೇಳಿ, ಅವನನ್ನು ಬೀಳ್ಕೊಡಲೆಂದು ಗೇಟಿನವರೆಗೂ ಬಂದು ಹೇಳಿದೆ.

ಶ್ರವಣ್ ಹೊರಡುವ ಮೊದಲು, ಇಬ್ಬರೂ ಫೋನಂಕಿಗಳನ್ನು ವಿನಿಮಯಿಸಿಕೊಂಡೆವು.

★★★

ಹೀಗೆ ಸುರುಗೊಂಡ ಶ್ರವಣನೊಡನೆಯ ಮುಲಾಕಾತು, ಬರೇ ಮೂರೂ ಮತ್ತೊಂದು ವಾರದಲ್ಲಿ ಅವನನ್ನು ನೋಡಿದರೆ ಸಾಕು, ಎದೆಯೊಳಗೇನೋ ಮೀಂಟಿ ಮಿಡಿಯುವವರೆಗೂ ಬೆಳೆದುಬಿಟ್ಟಿದೆ. ಅವನನ್ನು ನೋಡುವಾಗಲೆಲ್ಲ, ಹೃಷಿ ನೆನಪಾಗುತ್ತಾನೆ. ಈವರೆಗೆ ಕಂಡು ಗೊತ್ತಿರದ ನೋವೊಂದು ಮನಸ್ಸು ಪಸರಿಕೊಂಡು ಕಾಡುತ್ತದೆ. ಇದನ್ನೇನು ಪ್ರೀತಿ ಅನ್ನುವುದೆ? ವಾಂಛೆಯೆಂಬ ವಾಂಛಲ್ಯವೆ? ವಾತ್ಸಲ್ಯವೆಂಬ ವಾತ್ಸಲ್ಯವೆ? ತಿಳಿಯದೆ ಕಂಗೆಡುವಂತಾಗುತ್ತದೆ. ಇನ್ನೇನು, ನಾಳೆ ನಾಳಿದ್ದರಲ್ಲಿ, ಅವನು ಕೆಲಸಕ್ಕೆ ವಾಪಸಾಗಿ ಬೆಂಗಳೂರಿನ ಧಾವಂತದಲ್ಲಿ ಮರುಹೂಡಿಕೊಂಡನೆಂದರೆ, ಹೃಷಿಗಿಂತಲೂ ಅಥವಾ ಹೃಷಿಯಷ್ಟೇ ದೂರವಾಗಿಬಿಡುತ್ತಾನಷ್ಟೆ, ಅಂತನಿಸಿ ಮನಸ್ಸು ಮಮ್ಮಲಿಸುತ್ತದೆ, ಆದರೂ, ಈ ಶ್ರವಣ್ ಅವಕಾಶ ಸಿಕ್ಕಾಗಲೆಲ್ಲ, ಯಾಕೆ ಹಿಂದಿನಿಂದ ಬಂದು ನನ್ನ ಮೈಬಳಸಿ ಅಪ್ಪಿಕೊಳ್ಳುತ್ತಾನೆ? ಜತೆಗೂಡಿ ನಡೆಯುವಾಗಲೆಲ್ಲ, ಹೆಗಲು ಬಳಸಿ ಮೈಗೊತ್ತಿಕೊಳ್ಳುತ್ತಾನೆ. ಕೈಹಿಡಿಯುತ್ತಾನೆ. ಅಂಗೈ ಮುದ್ದಿಸುತ್ತಾನೆ... ಲವ್ಯೂ ಅಂತನ್ನುತ್ತಾನೆ! ಅರ್ಥವಾಗುವುದಿಲ್ಲ. ಈ ಕುರಿತು ಮನಸ್ಸು ಹೂಡುವಾಗ, ಏನೇನೋ ಅನಿಸಬಾರದ್ದೆಲ್ಲ ಅನ್ನಿಸಿ ತಲೆಕೆಡುತ್ತದೆ. ಬಹುಶಃ ಇದು, 'ಹಾಗೆಲ್ಲ' ಅರ್ಥವಾಗದಿದ್ದರೇನೇ ಒಳಿತು!

ಮೊದಲ ಸಲ ಸಿಕ್ಕ ಮಾರನೇ ದಿವಸಕ್ಕೆಲ್ಲ, ಶ್ರವಣ್, ಬೆಳಬೆಳಿಗ್ಗೆ ಒಂದು ಮೆಸೇಜು ಕಳಿಸಿದ. 'ಈಶ್, ಕೆನ್ನೈ ವಿಸಿಟ್ ಯು ಟುಡೇ?' ಯೆಸ್ಸಂತಂದೆ. ಮಧ್ಯಾಹ್ನ ಮೂರರ ಸುಮಾರಿಗೆ, ಮನೆಗೆ ಬಂದು, ಇಂಟರ್ನೆಟ್ಟಿನಲ್ಲಿ ತೊಡಗಿದ್ದ ನನ್ನನ್ನು ಅದರಿಂದಾಚೆಗಿನ ವಾಸ್ತವವಿಹಾರದಲ್ಲಿ ಹೂಡಿಕೊಂಡ. ಇಬ್ಬರೂ ತೋಟ ಸುತ್ತಿಕೊಂಡು ಬಂದೆವು. ಮಾತಿನ ನಡುವೆ, 'ಕೊಪ್ಪದ ಲಾಡ್ಜೇಕೋ ಸರಿ ಹೋಗುತಾ ಇಲ್ಲ... ಈ ಕಂಡು ಗೊತ್ತಿರದ ಊಟ ತಿಂದು ನಾಲಿಗೆ ಬೇರೆ ಎಕ್ಕುಟ್ಟಿದೆ...' ಅಂತಂದ. ನಾನೂ ಹಿಂದೆಮುಂದೆ ನೋಡದೆ, ಒಮ್ಮೆಗೇ, 'ಬೇಕಿದ್ದರೆ, ನೀನು ನಮ್ಮನೆಯಲ್ಲೇ ಇರಬಹುದು... ಒಂದು ರೂಮು ಖಾಲಿಯಿದೆ...' ಅಂದಿದ್ದಷ್ಟೆ, ತಕ್ಷಣವೇ ಒಪ್ಪಿ, ಮರುಮುಂಜಾನೆಗೆಲ್ಲ ಲಗೇಜು ತಂದು, ಗೆಸ್ಟ್‌ರೂಮಿನಲ್ಲಿ ಒಟ್ಟಿಕೊಂಡ. ನಾನು, ಕನಕದುರ್ಗೆ ಮತ್ತು ಪೆಂಟಮ್ಮರಿರುವ ನಮ್ಮೊಡನೆ ಒಟ್ಟಾಗಿಹೋದ.

ಸರಿ... ಮಾರನೆಯ ದಿವಸದಿಂದ ನನ್ನ ದಿನಚರಿಯೇ ಬದಲಿಹೋಯಿತು. ಬೆಳಿಗ್ಗೆ, ಕನಕದುರ್ಗೆಯ ಪ್ರಾತಃಕರ್ಮಗಳು ಮುಗಿದಿದ್ದೇ ಓದಿನಲ್ಲಿ ತೊಡಗುತ್ತಿದ್ದ ನಾನು, ಶ್ರವಣನ ಬೆನ್ನಿನಲ್ಲಿ ಪಿಲಿಯನೇರಿ, ಬೈಕಿನಲ್ಲಿ ಕಾಡುಮೇಡು ಸುತ್ತುವುದಾಯಿತು. ತೊರೆಹಳ್ಳಗಳಲ್ಲಿ ಕಾಲಿಳಿಬಿಟ್ಟುಕೊಂಡು ಕೂರುವುದಾಯಿತು. ಝರಿಗಳಲ್ಲಿ ಮೈಯೊಡ್ಡಿ ಅವನು ಮೀಯುವುದನ್ನು ನೋಡಿಕೊಂಡಿದ್ದಾಯಿತು. ವರ್ಷಗಳ ಹಿಂದೆ 'ಸೀತಾನದಿ'ಯನ್ನು ಹೊಕ್ಕ ಮೇಲೆ, ಅಥವಾ ಹೊಕ್ಕುವಾಗ, ಏನೇನನ್ನೆಲ್ಲ ಮಾಡಬೇಕೆಂದುಕೊಂಡಿದ್ದೆನೋ ಕನಕದುರ್ಗೆಯ ಅನಾರೋಗ್ಯದ